ಒಂದು ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ. 'ಒಂದು ಮೊಟ್ಟೆಯ ಕಥೆ' ಚಿತ್ರದ ನಿರ್ಮಾಪಕ ಸುಹಾನ್ ನಿರ್ದೇಶನದ ಹೊಸ ಸಿನಿಮಾದಲ್ಲಿಯೂ ನಟಿಸಿದ್ದಾರೆ.

ಅವಕಾಶಗಳು ಅಷ್ಟಾಗಿ ಬರದ ಕಾರಣದಿಂದ ಕೆಲವು ವರ್ಷ ಹೊರದೇಶಕ್ಕೆ ಹೋಗಿ ಕೆಲಸ ಮಾಡಿ ಒಂದಿಷ್ಟು ದುಡಿದುಕೊಂಡು ಚಿತ್ರರಂಗಕ್ಕೆ ಮರಳಲು ಹರಿ ನಿರ್ಧರಿಸಿದ್ದರು. ಅದಕ್ಕಾಗಿ ಕೆಲಸವನ್ನು ಗಿಟ್ಟಿಸಿಯೂ ಆಗಿತ್ತು. ಇನ್ನೇನು ಕೆಲಸಕ್ಕೆ ಸೇರಿಕೊಳ್ಳಲು ಒಂದೂವರೆ ತಿಂಗಳು ಇದೆ ಎನ್ನುವಾಗ ಪ್ರವೀಣ್ ಕುಮಾರ್ ತಮ್ಮ ಸಿನಿಮಾದಲ್ಲಿ ನಟಿಸಲು ಕರೆದರು. ವಿದೇಶಕ್ಕೆ ಹೋಗುವ ನಿರ್ಧಾರ ನಟನೆಯ ವ್ಯಾಮೋಹದ ಮುಂದೆ ಸೋತಿತು.

ಈ ಸಿನಿಮಾ ತಮ್ಮ ವೃತ್ತಿಜೀವನದಲ್ಲೊಂದು ತಿರುವು ಕೊಡಲಿದೆ ಎಂಬ ನಂಬಿಕೆ ಹರಿಶರ್ವ ಅವರಿಗಿದೆ. 'ಪ್ರವೀಣ್ ಅವರ ಬರವಣಿಗೆ ನನಗಿಷ್ಟ. ಅವರು ಈ ಸಿನಿಮಾವನ್ನು ಕಟ್ಟಿರುವ ರೀತಿ ನನಗೆ ಇಷ್ಟವಾಯ್ತು. ಬಳ್ಳಾರಿಯ ಸೊಗಡು ತುಂಬಾ ಚೆನ್ನಾಗಿ ಬಂದಿದೆ' ಎಂದು 'ಅಮರಪ್ರೇಮಿ ಅರುಣ್' ಸಿನಿಮಾದ ಕುರಿತು ಉತ್ಸಾಹದಿಂದ ಮಾತನಾಡುವ ಅವರು ಸದ್ಯ ಬರವಣಿಗೆಯಲ್ಲಿಯೂ ತೊಡಗಿಕೊಂಡಿದ್ದಾರೆ.

'ಈಗಷ್ಟೇ ಬರವಣಿಗೆಗೆ ಶುರುಮಾಡಿದ್ದೇನೆ. ಅದು ಕೊನೆಯ ಹಂತ ತಲುಪಿದ ಮೇಲೆ ನನಗೆ ತೃಪ್ತಿಯಾದರೆ, ಒಳ್ಳೆಯ ತಂಡ ಸಿಕ್ಕರೆ ನಿರ್ದೇಶನವನ್ನೂ ಮಾಡಬಹುದು' ಎನ್ನುವ ಅವರು 'ನನ್ನ ನಿರ್ದೇಶನದ ಸಿನಿಮಾದಲ್ಲಿ ಬೇರೆಯವರೂ ನಾಯಕನಾಗಿ ನಟಿಸಬಹುದು' ಎನ್ನುತ್ತಾರೆ. ■



# ಅನಿರೀಕ್ಷಿತ ತಿರುವಿನಲ್ಲಿ ದಯಾನಂದ್!

ಮಿಮಿಕ್ರಿ ಮೂಲಕ ಪ್ರಸಿದ್ಧಿ ಗಳಿಸಿರುವ ದಯಾನಂದ್ ನಂತರ ಹಲವು ಸಿನಿಮಾಗಳಲ್ಲಿಯೂ ನಟಿಸಿದರು. ಈಗ ಅವರು ತಮ್ಮ ಬದುಕಿನ ಮತ್ತೊಂದು ಅಧ್ಯಾಯವನ್ನು ಬರೆದು, ಜನರ ಸ್ಪಂದನಕ್ಕಾಗಿ ಎದುರುನೋಡುತ್ತಿದ್ದಾರೆ. ಈ ಹೊಸ ಅಧ್ಯಾಯದ ಹೆಸರು ನಿರ್ದೇಶನ. ಹೌದು, ಮಿಮಿಕ್ರಿ ದಯಾನಂದ್ ಈಗ ನಿರ್ದೇಶಕರಾಗಿದ್ದಾರೆ.

ಲಾಕ್‌ಡೌನ್ ಸಮಯದಲ್ಲಿಯೇ ಅವರು ಒಂದು ಚಿತ್ರವನ್ನು ರೂಪಿಸಿದ್ದು ಅದೀಗ ಪೂರ್ತಿಗೊಂಡಿದೆ. ಆ ಚಿತ್ರದಲ್ಲಿ ಎರಡೇ ಪಾತ್ರಗಳಿವೆ. ಒಂದೇ ಸ್ಥಳದಲ್ಲಿ ನಾಲ್ಕು ಲೊಕೇಶನ್‌ಗಳನ್ನು ನಿರ್ಮಿಸಿ ಅಲ್ಲಿಯೇ ಚಿತ್ರೀಕರಣ ಪೂರೈಸಿದ್ದಾರೆ. ಚಿತ್ರದ ಹೆಸರು 'ಅನಿರೀಕ್ಷಿತ'.

ಬದುಕಿನಲ್ಲಿ ನಾವು ನಿರೀಕ್ಷಿಸುವುದು ಒಂದಾದರೆ, ಅದು ತೆಗೆದುಕೊಳ್ಳುವ ತಿರುವು ಮತ್ತೊಂದು. ಇಂಥ ಅನಿರೀಕ್ಷಿತ ತಿರುವುಗಳು ಹೇಗೆ ನಮ್ಮ ಬದುಕಿನ ಗತಿಯನ್ನೇ ಬದಲಿಸಿಬಿಡುತ್ತವೆ ಮತ್ತು ಯಾರೂ ಕಲಿಸದ ಪಾಠಗಳನ್ನು ಕಲಿಸುತ್ತವೆ ಎಂಬುದನ್ನು ಮನಸಲ್ಲಿಟ್ಟುಕೊಂಡು ಈ ಚಿತ್ರದ ಕಥೆಯನ್ನು ಹೆಣೆದಿದ್ದಾರೆ ದಯಾನಂದ್. ದಯಾನಂದ್ ಮತ್ತು ಭಾಮಾ ಚಿತ್ರದಲ್ಲಿನ ಎರಡೇ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಬರಿ ಹದಿಮೂರೇ ಜನರ ತಂಡ ಈ ಚಿತ್ರವನ್ನು ರೂಪಿಸಿದ್ದು, ಎಸ್.ಕೆ. ಟಾಕೀಸ್ ಲಾಂಛನದಲ್ಲಿ ಶಾಂತಕುಮಾರ್ ನಿರ್ಮಾಣ ಮಾಡಿದ್ದಾರೆ. ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನಕ್ಕೆ ಅನುಮತಿ ದೊರಕಿದ ಕೂಡಲೇ ಚಿತ್ರಮಂದಿರಗಳು ಮತ್ತು ಒಟಿಟಿ ಎರಡೂ ವೇದಿಕೆಗಳಲ್ಲಿ ಈ ಚಿತ್ರವನ್ನು ಬಿಡುಗಡೆ ಮಾಡುವ ಆಲೋಚನೆಯಲ್ಲಿ ತಂಡವಿದೆ. ನೆಳ್ಳುಳ್ಳಿ ರಾಜಶೇಖರನ್ ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಗುರುಕಿರಣ್ ಸಂಗೀತ ನೀಡಿದ್ದಾರೆ. ಜೀವನ್ ಗೌಡ ಛಾಯಾಗ್ರಹಣವಿರುವ 'ಅನಿರೀಕ್ಷಿತ'ವನ್ನು ರಘು ಸಂಕಲಿಸಿದ್ದಾರೆ.

ಈಗ ಚಿತ್ರದ ಟೈಟಲ್ ಪೋಸ್ಟರ್ ಅನ್ನು ತಂಡ ಜಾಹೀರುಗೊಳಿಸಿದ್ದು, ಸದ್ಯವೇ ಟ್ರೇಲರ್ ಬಿಡುಗಡೆ ಮಾಡುವ ಸಿದ್ಧತೆ ಮಾಡಿಕೊಂಡಿದೆ. ■

# ಮತ್ತೆ ಶೂಟಿಂಗ್! ಮುಂದೆ?

ಈ ವರ್ಷದ ಆರಂಭದಲ್ಲಿ ಶೂಟಿಂಗ್‌ಗೆ ಅನುಮತಿ ಸಿಕ್ಕಿದ್ದಾಗ ಇಡೀ ಚಿತ್ರರಂಗವೇ ಗರಿಗೆದರಿತ್ತು. ಬಂದಿರುವ ಕಷ್ಟ ದೂರವಾಗುತ್ತದೆ, ಎಲ್ಲ ಸರಿಯಾಗುತ್ತದೆ ಎಂಬ ನಂಬಿಕೆಯಲ್ಲಿ ಚಿತ್ರತಂಡಗಳು ಸೆಟ್‌ಗೆ ಇಳಿದಿದ್ದವು. ಆದರೆ ಕೆಲವೇ ದಿನಗಳಲ್ಲಿ ಬಂದ ಎರಡನೇ ಅಲೆ ಅವರ ಉತ್ಸಾಹವನ್ನೆಲ್ಲ ಚಿಂದಿ ಮಾಡಿತ್ತು. ಕ್ಯಾಮೆರಾ ಕಣ್ಣನ್ನು ಕೊರೊನಾ ದೂಳು ಮಬ್ಬಾಗಿಸಿತ್ತು.

ಈಗ ಮತ್ತೆ ಶೂಟಿಂಗ್‌ಗೆ ಅನುಮತಿ ಸಿಕ್ಕಿದೆ. ಆದರೆ ವರ್ಷಾರಂಭದಲ್ಲಿ ಚಿತ್ರರಂಗದಲ್ಲಿ ಇದ್ದ ಉತ್ಸಾಹ ಈಗಿಲ್ಲ. ಅರ್ಧಮರ್ಧ ಚಿತ್ರೀಕರಣ ಮಾಡಿ ನಿಲ್ಲಿಸಿದ್ದ ಕೆಲವು ಸಿನಿಮಾಗಳು ಚಿತ್ರೀಕರಣಕ್ಕೆ ತೊಡಗಿವೆಯೇ ಹೊರತು ಹೊಸ ಸಿನಿಮಾಗಳು ಸೆಟ್ಟೇರುತ್ತಿಲ್ಲ. ಚಿತ್ರೀಕರಣದ ದಾರಿಯ ಕಣ್ಣಳತೆಯ ತಿರುವಿನ ಆಚೆ ಹೊಂಚುಹಾಕಿ ಕೂತಿರುವ ಮೂರನೇ ಅಲೆಯ ಆತಂಕ ಎಲ್ಲರಲ್ಲಿಯೂ ಇದೆ.

ಮೂರನೇ ಅಲೆ ಸೂಚನೆಯಾದ 'ಡೆಲ್ಟಾ ಪ್ಲಸ್' ಪ್ರಕರಣಗಳು ಭಾರತದಲ್ಲಿ, ಕರ್ನಾಟಕದಲ್ಲಿಯೂ ಪತ್ತೆಯಾಗುತ್ತಿವೆ. ಅದು ಮಾಡುವ ಅನಾಹುತಗಳು ಇನ್ನಷ್ಟು ಭೀಕರ ಎಂದು ತಜ್ಞರೇ ಹೇಳುತ್ತಿದ್ದಾರೆ. ಈಗಾಗಲೇ ಎರಡು ಲಾಕ್‌ಡೌನ್‌ಗಳ ಹೊಡೆತ ತಿಂದ ಚಿತ್ರರಂಗದ ಮಂದಿಯಲ್ಲಿ ಮತ್ತೊಂದು ಹೊಡೆತಕ್ಕೆ ಮೈಕೊಡುವಷ್ಟು ತ್ರಾಣ ಉಳಿದಿಲ್ಲ. ಹಾಗಾಗಿ ನಿರ್ಮಾಪಕರು ಹಣ ಚೆಲ್ಲಿ ಕಾದು ಕೂರಲು ಇಷ್ಟಪಡುತ್ತಿಲ್ಲ. ನಿರ್ದೇಶಕರುಗಳಿಗೂ ತಮ್ಮ ಕನಸು ಅರ್ಧಕ್ಕೇ ನಿಲ್ಲುವುದು ಖುಷಿಯ ವಿಷಯವೇನಲ್ಲ. ಹಾಗಾಗಿ ಕಾದು ನೋಡುವುದೇ ಒಳಿತು ಎಂಬ ನಿರ್ಧಾರಕ್ಕೆ ಬಹುತೇಕ ಮಂದಿ ಬಂದಿದ್ದಾರೆ.

ಆದರೆ ಈ ಕಾಯುವಿಕೆ ಎಷ್ಟು ದಿನ? ಎಲ್ಲ ಸರಿಹೋಗುವುದು ಯಾವಾಗ? ಈ ಪ್ರಶ್ನೆಗೆ ಸದ್ಯಕ್ಕಂತೂ ಯಾರ ಬಳಿಯೂ ಉತ್ತರವಿಲ್ಲ. ಯಾಕೆಂದರೆ ಇದು ಬರಿ ಚಿತ್ರರಂಗಕ್ಕೆ ಮಾತ್ರ ಸೀಮಿತವಾದ ಪ್ರಶ್ನೆಯೂ ಅಲ್ಲವಲ್ಲ. ಇಡೀ ದೇಶವೇ, ಜಗತ್ತೇ ಎದುರಿಸುತ್ತಿರುವ ಪ್ರಶ್ನೆ. ■